ಕರ್ನಾಟಕ ಸರ್ಕಾರ

# <u>ಉಪತಹಶೀಲ್ದಾರರವರ ನ್ಯಾಯಾಲಯ, ನಾಡ ಕಾರ್ಯಾಲಯ</u>
# <u>ಹಂಪಸಾಗರ,</u>

<u>ಸಂ.ಕಂ.ಪಹಣಿ/ವಿವಾದ/ 35/2015-16</u> ದಿ: 5.5.16.

**ಉಪಸ್ಥಿತರು : ಶ್ರೀ ಎ.ಚಂದ್ರಾನಾಯ್ಕ ಉಪತಹಶೀಲ್ದಾರರು, ನಾಡ ಕಛೇರಿ, ಹಂಪಸಾಗರ**

ವಾದಿಗಳು
1) ಶ್ರೀ ಬೂದನೂರು ಗಂಗಮ್ಮ
   ಗಂಡ ಗಿರಿಯಪ್ಪ
2) ಶ್ರೀ ಹುಬ್ಬಳ್ಳಿ ಹುಲಿಗೆವ್ವ
   ಗಂಡ ದಿ॥ ಮಲ್ಲಪ್ಪ
3) ಶ್ರೀ ಹುಲುಗಪ್ಪ
   ಗ್ರಾಮ : ಗಿರೇಗೊಂಡನಹಳ್ಳಿ.

ಪ್ರತಿವಾದಿಗಳು
ಕಂದಾಯ ನಿರೀಕ್ಷಕರು
ಹಂಪಸಾಗರ.

ವಿಷಯ : – **ಹಗರಿಬೊಮ್ಮನಹಳ್ಳಿ ತಾಲೂಕು ಗದ್ದಿಕೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 433 ವಿಸ್ತೀರ್ಣ 4–88 ಎಕರೆ ಜಮೀನು ಪವತಿ ವಾರಸಾ ಪ್ರಕಾರ ಹಕ್ಕು ಬದಲಾವಣೆ ವಿಷಯದಲ್ಲಿ ತಕರಾರು–ವಿಚಾರಣೆ.**

**<u>ಪೀಠಿಕೆ :–</u>**

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಗದ್ದಿಕೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 433 ವಿಸ್ತೀರ್ಣ 4–88 ಎಕರೆ ಜಮೀನು ವಾದಿಗಳ ಪೈಕಿ ವಾದಿ (2) ಇವರು ಪವತಿ ಹಕ್ಕು ಬದಲಾವಣೆ ಮಾಡಿಕೊಳ್ಳಲು ತಾಲೂಕಾ ಭೂಮಿಕೇಂದ್ರದಲ್ಲಿ ಅರ್ಜಿ ಸಲ್ಲಿಸಿಕೊಂಡಿರುತ್ತಾರೆ. ಅರ್ಜಿ ಪ್ರಕಾರ ಭೂಮಿ ಕೇಂದ್ರದಲ್ಲಿ ವಹಿವಾಟು ಸಂಖ್ಯೆ 74 ಹಕ್ಕು ಬದಲಾವಣೆ ಸಂಖ್ಯೆ ಹೆಚ್–19/2015–16 ರಂತೆ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಹಕ್ಕು ಬದಲಾವಣೆ ಕ್ರಮಕ್ಕಾಗಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರಿಗೆ ರವಾನಿಸಲಾಗಿ ಗ್ರಾಮ ಲೆಕ್ಕಾಧಿಕಾರಿ ಗದ್ದಿಕೇರಿ ಇವರು ಹಕ್ಕು ಬದಲಾವಣೆಯ ನಮೂನೆ 12 ಹಾಗೂ ನೋಟೀಸು ನಮೂನೆ 21ನ್ನು ಜಾರಿ ಮಾಡಿರುತ್ತಾರೆ. ಜಾರಿ ಮಾಡಲಾಗಿ ಗ್ರಾಮ ಲೆಕ್ಕಾಧಿಕಾರಿ ಗದ್ದಿಕೇರಿ ಇವರು ವರದಿ ಮಾಡುತ್ತಾ ಅರ್ಜಿದಾರರು ನೋಟೀಸುಗಳಿಗೆ ಸಹಿ ಹಾಕಿಲ್ಲವೆಂತಲೂ ಮತ್ತು ಅರ್ಜಿಯೊಂದಿಗೆ ವಂಶವೃಕ್ಷ ಸಲ್ಲಿಸಿಲ್ಲವೆಂತಲೂ ವರದಿ ಮಾಡಿರುತ್ತಾರೆ. ಹಾಗೂ ತಾಲೂಕಾ ಭೂಮಿ ಕೇಂದ್ರದಲ್ಲಿ ತಕರಾರು ಸ್ವೀಕೃತಿ ಸಂಖ್ಯೆ 1881/2015–16 ರಂತೆ ತಕರಾರು ಸಲ್ಲಿಕೆಯಾಗಿರುತ್ತದೆ. ತಕರಾರು ಸಲ್ಲಿಕೆಯಾದ ಹಿನ್ನೆಲೆಯಲ್ಲಿ ಕಂದಾಯ ನಿರೀಕ್ಷಕರು ಹಂಪಸಾಗರ ಇವರು ಮುಂದಿನ ವಿಚಾರಣೆಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ.

ಪ್ರಕರಣವನ್ನು ಈ ಮೇಲಿನ ಸಂಖ್ಯೆಯಂತೆ ದಾಖಲಿಸಿಕೊಂಡು ದಿನಾಂಕ: 19–11–2015 ರಿಂದ ದಿನಾಂಕ: 05–05–2016 ರವರೆಗೆ ವಿಚಾರಣೆ ನಡೆಸಲಾಯಿತು. ವಿಚಾರಣೆಯಲ್ಲಿ ವಾದಿಗಳ ಪರವಾಗಿ ಮಗನಾದ ದುರುಗಪ್ಪ ಇವರು ಹಾಜರಾಗಿದ್ದು ವಿಚಾರಣೆಗೆ ಸಂಬಂಧಿಸಿದ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ.

ದಾಖಲೆಗಳನ್ನು ಪರಿಶೀಲಿಸಲಾಗಿ ವಿವಾದಿತ ಆಸ್ತಿಯು ಹಾಲೀ ಪಹಣಿ ಪ್ರಕಾರ 1) ಬೂದನೂರು ಗಂಗಮ್ಮ ಗಂಡ ಗಿರಿಯಪ್ಪ, ಯಲ್ಲಪ್ಪ, ಹುಲುಗಪ್ಪ ಗಿರಿಗೊಂಡನಹಳ್ಳಿ ಅಂತಾ ಇರುತ್ತದೆ. ಈ ಜಂಟೀ ಪಟ್ಟಾದಾರರ ಪೈಕಿ ಯಲ್ಲಪ್ಪ ಪವತಿಯಾಗಿದ್ದು ವಾರಸಾ ಪ್ರಕಾರ ಹೆಂಡತಿ ಅರ್ಜಿದಾರರಾಗಿರುತ್ತಾರೆ. ಆದರೆ ಅರ್ಜಿಗೆ ಸಂಬಂಧಿಸಿದಂತೆ ವಂಶವೃಕ್ಷ, ಮರಣ ಪ್ರಮಾಣಪತ್ರ ಅಥವಾ ಪ್ರಮಾಣ ಪತ್ರ ಹಾಗೂ ಇತರೆ ದಾಖಲೆಗಳನ್ನು ಸಲ್ಲಿಸಲು ವಿಫಲರಾಗಿರುತ್ತಾರೆ. ತಕರಾರು ಸಲ್ಲಿಸಿರುವವರಾದರೂ ತಕರಾರಿಗೆ ಸಂಬಂಧಿಸಿದ ವಿವರಣೆಯುಳ್ಳ ದಾಖಲೆಗಳು ಲಭ್ಯವಿರುವುದಿಲ್ಲ. ಈ ಎಲ್ಲಾ ಕಾರಣ ಹಾಗೂ ವಾಸ್ತವಾಂಶ ಹಿನ್ನೆಲೆಯಲ್ಲಿ ಈ ಕೆಳಕಂಡ

## ಆದೇಶ

ಹಗರಿಬೊಮ್ಮನಹಳ್ಳಿ ತಾಲೂಕು, ಹಂಪಸಾಗರ ಹೋಬಳಿ, ಗದ್ದಿಕೇರಿ ಗ್ರಾಮಕ್ಕೆ ಸೇರಿದ ಜಮೀನು ಸ.ನಂ. 433 ವಿಸ್ತೀರ್ಣ 4–88 ರ ಪವತಿ ಅರ್ಜಿಯನ್ನು ಗೈರು ಮಂಜೂರು ಮಾಡಿ ಪಹಣಿ ಪ್ರಕಾರ ಯಥಾಸ್ಥಿತಿ ಮುಂದುವರಿಸಲು ಆದೇಶಿಸಿದೆ. ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಉಪತಹಶೀಲ್ದಾರರು
ನಾಡಕಛೇರಿ, ಹಂಪಸಾಗರ

ಪ್ರತಿಯನ್ನು :–

1) ವಾದಿಗಳಿಗೆ
2) ಪ್ರತಿಯನ್ನು ತಾಲೂಕು ಭೂಮಿ ಕೇಂದ್ರಕ್ಕೆ
3) ಹೆಚ್ಚುವರಿ ಪ್ರತಿ ಕಡತಕ್ಕೆ